Yenepoya Medical College

# HEALTHCARE AND COVID-19 SERVICES-MEDIA AND NEWSPAPER CLIPPINGS

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

# Covid-19 testing lab in Yenepoya Hospital, second in DK

DHNS, Mangaluru, MAY 10 2020, 22:32 IST | UPDATED: MAY 10 2020, 22:37 IST

Yenepoya Medical College Hospital in Deralakatte has received nod from Indian Council of Medical Research (ICMR) to test samples for Covid-19. In fact, 82 samples were tested in the laboratory on the first day itself. Yenepoya Hospital is the first private hospital in Dakshina Kannada district to get the ICMR approval for the Covid-19 RT-PCR.

The district now has two centres for the Covid-19 testing, including the one at district Wenlock hospital. The approval of a new testing facility will help in getting quick reports of the Covid-19 tests, as it will cater to samples collected from Dakshina Kannada, Udupi and Uttara Kannada districts. This will also ease the pressure on government testing centre at Wenlock hospital.

After a detailed assessment by a team from National Accreditation Board for Testing and Calibration Laboratories (NABL), the ICMR gave its approval to start the testing.

The Yenepoya Covid-19 RT-PCR laboratory is well equipped with state-of-the-art real-time PCR machine, bio-safety cabinets, a cold centrifuge and others. It has 12 medical microbiologists and technicians who are trained in molecular diagnostics.

The laboratory is currently running the tests in two shifts and plans to make it functional round-the-clock if the sample loads increase further. As many as 240 samples can be tested at the new facility per day.

For the purpose of testing a valid prescription by a doctor, a photo identity card has to be presented as per the government guidelines. Well trained health care personnel will collect the samples in specially designed kiosks as per the ICMR guidelines. The samples will be placed in a viral transport medium and reach the laboratory in a cold chain. The test results will be made available to the patients within 24-36 hours of the sample collection. The test will be reasonably priced to keep it affordable thus enabling the neighbouring hospitals, nursing homes and others to make use of the facility.

As a part of its corporate social responsibility, the management has stated that each day a certain number of tests will be done at highly subsidised cost for the most deserving.

Provision for home collection of samples with all the necessary personal protective equipment will also be started soon, the sources said.

There will be a sample collection centre at Yenepoya Speciality Hospital in Kodialbail, sources added.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

Udayavani 25-05-2021

### ▶ ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಾಸಕ ಖಾದರ್ ಭೇಟಿ

# 'ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಣೆ'

**ಉಳ್ಳಾಲ, ಮೇ 24:** ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರವನ್ನು ತುರ್ತು ಸಂದರ್ಭ ಕೋವಿಡ್ ಕೇರ್ ಆಸ್ಪತ್ರೆಯಾಗಿ ನಿರ್ಮಿಸಲು ಹಂತ ಹಂತದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಲಸಿಕೆ, ಗರ್ಭಿಣಿಯರು ಸಹಿತ ನಿತ್ಯ ಬರುವ ರೋಗಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವಿಭಾಗವನ್ನು ಮಾಡಲಾಗುತ್ತಿದೆ ಎಂದು ಶಾಸಕ ಯು.ಟಿ. ಖಾದರ್ ಹೇಳಿದರು.



ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಾಸಕ ಖಾದರ್ ಅವರು ಭೇಟಿ ನೀಡಿದರು.

ಉಳ್ಳಾಲದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕೋವಿಡ್-19 ನಿರ್ವಹಣೆಗೆ ಸಜ್ಜುಗೊಳ್ಳುತ್ತಿರುವ ಆಸ್ಪತ್ರೆ ವಠಾರವನ್ನು ವೀಕ್ಷಿಸಿ ಅವರು ಮಾತನಾಡಿದರು. ಹೆರಿಗೆ, ಇಂಜೆಕ್ಷನ್ ಬರುವವರಿಗೆ ಬೇರೆಯೇ ಜಾಗದಲ್ಲಿ ಪ್ರವೇಶ ಮತ್ತು ಚಿಕಿತ್ಸೆ, ಕೋವಿಡ್ ಸಂಬಂಧಿಸಿದ ರೋಗಿಗಳಿಗೆ ಬೇರೆಯದೇ ಆದ ಫೀವರ್ ಕ್ಲಿನಿಕ್ ಪ್ರವೇಶ ಹಾಗೂ ಆಕ್ಸಿಜನ್ ಲೆವೆಲ್ ಕಡಿಮೆ ಆಗಿ ಬಂದವರನ್ನು ತಕ್ಷಣ ಮೇಲಿನ ಮಹಡಿಯಲ್ಲಿ ದಾಖಲುಗೊಳಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ ಎಂದರು.

ವೈದ್ಯರ ಸೇವೆ ಹಾಗೂ ಆಸ್ಪತ್ರೆಯ ಸಂಪೂರ್ಣ ನಿರ್ವಹಣೆಯನ್ನು ಯೇನಪೊಯ ಸಂಸ್ಥೆ ವಹಿಸಿಕೊಂಡಿದೆ. 20 ನರ್ಸ್‌ಗಳು, 12 ವೈದ್ಯರು, ಅಟೆಂಡರ್, ಕ್ಲೀನರ್, ಡೇಟಾ ಎಂಟ್ರಿ ಆಪರೇಟರ್, ಲಾಂಡ್ರಿ ಎಲ್ಲವೂ ನಿರ್ವಹಣೆ ಮಾಡಲಿದೆ. ತಾನು ಮತ್ತು ಜಿಲ್ಲಾಧಿಕಾರಿ ಯೇನಪೊಯ ಸಂಸ್ಥೆ ಎದುರು ನಡೆಸಿದ ಸಭೆಯಲ್ಲಿ ಸಂಸ್ಥೆ ಅಧಿಕೃತರು ಒಪ್ಪಿಕೊಂಡಿದ್ದಾರೆ ಎಂದ ಅವರು ಸದ್ಯ ಉಳ್ಳಾಲದ ಆರೋಗ್ಯ ಕೇಂದ್ರವನ್ನು ತಯಾರು ಮಾಡಿ ಇಡಲಾಗುವುದು. ಊರಿನವರಿಗೆ ತೊಂದರೆಯಾಗುವ ಸಂದರ್ಭ ತಕ್ಷಣವೇ ಆರಂಭಿಸಲಾಗುವುದು ಎಂದರು.

ಉಳ್ಳಾಲ ನಗರಸಭೆ ಅಧ್ಯಕ್ಷೆ ಚಿತ್ರಾ ಚಂದ್ರಕಾಂತ್, ಉಪಾಧ್ಯಕ್ಷ ಅಯೂಬ್ ಮಂಚಿಲ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ। ಪ್ರಶಾಂತ್ , ನಗರಸಭೆ ಮಾಜಿ ಸದಸ್ಯ ಮುಸ್ತಾಫ ಮೊದಲಾದವರು ಉಪಸ್ಥಿತರಿದ್ದರು.

### ಖಾಸಗಿ ಕಾಲೇಜಿನವರು ಕಾರ್ಯ ನಿರ್ವಹಿಸಲಿ

ಪ್ರತಿ ತಾಲೂಕು ಆಸ್ಪತ್ರೆಗಳನ್ನು ಬೇರೆ ಬೇರೆ ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಯವರು ನಿರ್ವಹಿಸಬೇಕು. ಈ ಮೂಲಕ ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ ಬರುವಂತಹ ರೋಗಿಗಳ ಒತ್ತಡವನ್ನು ಕಡಿತ ಗೊಳಿಸಬೇಕು ಎಂದು ಶಾಸಕರು ಹೇಳಿದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

**UDAYAVANI ( SUDINA) 23-06-2021**



**ಕೊಣಾಜೆ:** ಕೊಣಾಜೆ ಗ್ರಾ.ಪಂ.ನ ಎರಡನೇ ವಾರ್ಡ್‌ನಲ್ಲಿ ವೈದ್ಯರ ನಡೆ ಹಳ್ಳಿಯ ಕಡೆ ಕಾರ್ಯಕ್ರಮದ ಅಂಗವಾಗಿ ಯೇನಪೊಯ ವೈದ್ಯಕೀಯ ಕಾಲೇಜಿನ ವೈದ್ಯಕೀಯ ತಂಡ ಗ್ರಾಮದ 60 ಮನೆಗಳಿಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಗ್ರಾಮ ಪಂಚಾಯತ್ ಅಧ್ಯಕ್ಷೆ ಚಂಚಲಾಕ್ಷಿ, ಪಿಡಿಒ ಸವಿತಾ, ಪಂಚಾಯತ್ ಸದಸ್ಯರಾದ ಶೇಖರ ಕೊಪ್ಪಳ, ರಾಜೀವಿಶೆಟ್ಟಿ ಶಶಿಕಲಾ ಆನಂದ್, ಅಂಗನವಾಡಿ ಶಿಕ್ಷಕಿ ಉಷಾ, ರೇಖಾ, ಆಶಾ ಕಾರ್ಯಕರ್ತೆಯರಾದ ಪೂರ್ಣಿಮಾ ಶೆಟ್ಟಿ, ಯೇನಪೊಯ ವೈದ್ಯಕೀಯ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka

VIJAYAVANI 25-03-2021

# ಇಂದಿನಿಂದ ಪ್ರಕೃತಿ, ಯೋಗ ಚಿಕಿತ್ಸೆ

ಮಂಗಳೂರು: ಯೇನೆಪೋಯ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಯೇನೆಪೋಯ ಪರಿಗಣಿಸಲ್ಪಟ್ಟ ವಿ.ವಿ ವತಿಯಿಂದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆ ಪುಣೆ ಸಹಯೋಗದಲ್ಲಿ ಉಚಿತ ಮೆಗಾ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸಾ ಶಿಬಿರ ಮಾ.25ರಿಂದ 28ರವರೆಗೆ ದೇರಳಕಟ್ಟೆಯ ವಿವಿಧ ಸ್ಥಳಗಳಲ್ಲಿ ನಡೆಯಲಿದೆ.

ಮಾ.25ರಿಂದ 27ರವರೆಗೆ ನರಿಂಗಾನದ ಯೇನೆಪೋಯ ಆಯುಷ್ ಕ್ಯಾಂಪಸ್‌ನಲ್ಲಿ, 27ರಂದು ಫುಡ್‌ಕ್ರಾಫ್ಟ್ ದೇರಳಕಟ್ಟೆಯಲ್ಲಿ, 28ರಂದು ದೇರಳಕಟ್ಟೆ ಯೇನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಬೆಳಗ್ಗೆ 9ರಿಂದ ಸಾಯಂಕಾಲ 4ರವರೆಗೆ ಶಿಬಿರ ನಡೆಯಲಿದೆ. ಉಚಿತ ಶಿಬಿರದ ಸೌಲಭ್ಯ ಪಡೆಯುವವರಿಗೆ ನೋಂದಣಿ ಕಡ್ಡಾಯವಾಗಿದ್ದು, ಇದಕ್ಕಾಗಿ ಆಸ್ಪತ್ರೆಯನ್ನು ಸಂಪರ್ಕಿಸಬಹುದು ಎಂದು ಯೇನೆಪೋಯ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವೈದ್ಯಕೀಯ ಕಾಲೇಜಿನ ಡೀನ್ ಡಾ.ನವೀನ್ ಜಿ.ಎಚ್.ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿಬಿರದಲ್ಲಿ ಪೌಷ್ಠಿಕಾಂಶದ ಬಗ್ಗೆ ಸಮಾಲೋಚನೆ, ಸೂಜಿ ಚಿಕಿತ್ಸೆ, ಆಕ್ಯುಪ್ರೆಶರ್, ಜಲಚಿಕಿತ್ಸೆ, ಮಾಲೀಶ್ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಯೋಗ ಪ್ರಾಣವಿದ್ಯಾ ಚಿಕಿತ್ಸೆ, ಭೌತ್ತ ಚಿಕಿತ್ಸೆ, ಯೋಗ ಚಿಕಿತ್ಸೆ ಜತೆಗೆ ರೋಗ ನಿರ್ದಿಷ್ಟ ಆಹಾರ ಪ್ರದರ್ಶನ, ಉಚಿತ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸೆಯ ಸಮಾಲೋಚನೆ ಮತ್ತು ಚಿಕಿತ್ಸಾ ಸೌಲಭ್ಯಗಳು ಇರಲಿದೆ ಎಂದು ತಿಳಿಸಿದರು.

ಡಾ.ನಾರಾಯಣ, ಅಬ್ದುಲ್ ರಜಾಕ್ ಸುದ್ದಿಗೋಷ್ಠಿಯಲ್ಲಿದ್ದರು.

VIJAYAVANI 08-04-2021

**24 ಗಂಟೆಯೂ ರೇಡಿಯಾಲಜಿ ಸೇವೆ** | **ಹೊಸ ತಂತ್ರಜ್ಞಾನದ ಉಪಕರಣ**

# ಯೇನೆಪೊಯದಲ್ಲಿ ಆಧುನಿಕ ಸೌಲಭ್ಯ

ಮಂಗಳೂರು: ಕೊಡಿಯಾಲ್‌ಬೈಲ್ ಯೇನೆಪೊಯ ಸ್ಪೆಷಾಲಿಟಿ ಆಸ್ಪತ್ರೆ ರೇಡಿಯಾಲಜಿ ಸೇವೆಗಳನ್ನು 24 ಗಂಟೆಯೂ ನುರಿತ ವೈದ್ಯರ ಉಪಸ್ಥಿತಿಯೊಂದಿಗೆ ನೀಡಲು ಸಜ್ಜಾಗಿದೆ. ಹಗಲು-ರಾತ್ರಿ ಆಸ್ಪತ್ರೆಗೆ ಆಗಮಿಸುವ ರೋಗಿಗಳ ತ್ವರಿತ, ನಿಖರ ರೋಗ ನಿರ್ಣಯವನ್ನು(ಡಯಾಗ್ನಸಿಸ್) ಪಡೆಯಬಹುದು. ಆಸ್ಪತ್ರೆ ತನ್ನ ರೇಡಿಯಾಲಜಿ ವಿಭಾಗಕ್ಕೆ ಹೊಸ ತಂತ್ರಜ್ಞಾನ ಮೂಲಕ ನವೀಕೃತಗೊಂಡ ಉಪಕರಣಗಳನ್ನು ಅಳವಡಿಸಲಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಮುಹಮ್ಮದ್ ತಾಹೀರ್ ತಿಳಿಸಿದರು.

ಹಿರಿಯ ರೇಡಿಯಾಲಜಿ ತಜ್ಞರಾದ ಡಾ.ದೇವದಾಸ್ ಆಚಾರ್ಯ, ಡಾ.ರವಿಚಂದ್ರ ಜಿ ಮತ್ತು ಡಾ.ವಿನಾಯಕ ಯು.ಎಸ್ ನೇತೃತ್ವದ ತಂಡ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಲಭ್ಯವಿದೆ. ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಬುಧವಾರ ಈ ಹೊಸ ಸೌಲಭ್ಯವನ್ನು ಆರಂಭಿಸಲಾಗಿದೆ. ತುರ್ತು ಅಗತ್ಯತೆಯಲ್ಲಿನ ವಿಳಂಬ ತಪ್ಪಿಸುವ ಉದ್ದೇಶದಿಂದ ಈ ಸೇವೆ ಪ್ರಾರಂಭಿಸಲಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೈದ್ಯರ ಲಭ್ಯತೆಯೊಂದಿಗೆ ದೊರಕಲಿರುವ ಹಗಲು-ರಾತ್ರಿ ರೇಡಿಯಾಲಜಿ ಸೇವೆ ನಗರದ ಆರೋಗ್ಯ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಿದೆ. ಮಂಗಳೂರಿನ ಹೃದಯಭಾಗದಲ್ಲಿ ದೊರೆಯುವ ಈ ಸೌಲಭ್ಯ ರೋಗಿಗಳ ತುರ್ತು ಅಗತ್ಯತೆಗೆ ವರದಾನವಾಗಲಿದೆ. ಇದು ಜೀವ ಉಳಿಸಬಲ್ಲ ಸೇವೆಯಾಗಿದೆ. ರೋಗಿಗಳಿಗೆ ತ್ವರಿತ ಪರಿಹಾರ ನೀಡಲಿದೆ ಎಂದರು. ಆಸ್ಪತ್ರೆ ತನ್ನ ಯುರೋಲಜಿ ಸೇವೆಗಳಿಗೆ ಡಾರ್ನಿಯರ್ ಕಾಂಪ್ಯಾಕ್ಟ್ ಡೆಲ್ಟಾ ಲಿಥೋಟ್ರಿಪ್ಟರ್‌ನ್ನು ಸೇರ್ಪಡೆಗೊಳಿಸುತ್ತಿದೆ. ಮೂತ್ರ ಪಿಂಡದ ಕಲ್ಲು ನಿವಾರಿಸುವಲ್ಲಿ, ಚೇತರಿಕೆ ಸಮಯ ಸುಧಾರಿಸುವಲ್ಲಿ ಮೂತ್ರಶಾಸ್ತ್ರಜ್ಞರನ್ನು ಶಕ್ತಗೊಳಿಸುವ ಈ ಉಪಕರಣವು ಶಕ್ತಿಯುತ ಚಿತ್ರಣ, ಗರಿಷ್ಠ ಶಕ್ತಿ ನೀಡುತ್ತದೆ. ಹೃದ್ರೋಗ ಮತ್ತು ಹೃದಯ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ಚಿಕಿತ್ಸೆ, ಮೂತ್ರಶಾಸ್ತ್ರ ಮತ್ತು ನೆಫ್ರಾಲಜಿ, ನರವಿಜ್ಞಾನ ಮತ್ತು ನರಶಸ್ತ್ರಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ, ವೈದ್ಯಕೀಯ ಮತ್ತು ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ, ಮೂಳೆಚಿಕಿತ್ಸೆ, ಶಿಶು ಚಿಕಿತ್ಸೆ, ಮಕ್ಕಳ ಚಿಕಿತ್ಸೆ ವಿಭಾಗ, ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ, ಬೆನ್ನುಮೂಳೆಯ ಕ್ಲಿನಿಕ್, ಡಯಾಲಿಸಿಸ್ ಘಟಕ ಹೊಂದಿದೆ ಎಂದು ವಿವರಿಸಿದರು.

ಆಸ್ಪತ್ರೆ ಆಪರೇಶನಲ್ ಡೈರೆಕ್ಟರ್ ಯೇನೆಪೊಯ ಅಬ್ದುಲ್ಲಾ ಜಾವೇದ್, ಸಿಇಒ ಡಾ.ಸಿ.ಕೆ.ರಂಜನ್, ಡಾ.ಆಕಾಶ್, ಡಾ.ದೇವದಾಸ್ ಆಚಾರ್ಯ, ಡಾ.ರವಿಚಂದ್ರ, ಡಾ.ವಿನಾಯಕ್ ಯು.ಎಸ್., ಡಾ.ಅಶೋಕ್ ಪಂಡಿತ್ ಉಪಸ್ಥಿತರಿದ್ದರು.



ಯೇನೆಪೊಯ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದೊರೆಯುವ ರೇಡಿಯಾಲಜಿ ಸೇವೆಗಳ ಕುರಿತು ಮಾಹಿತಿ ಪತ್ರವನ್ನು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಮುಹಮ್ಮದ್ ತಾಹೀರ್ ಬುಧವಾರ ಆಸ್ಪತ್ರೆಯಲ್ಲಿ ಬಿಡುಗಡೆಗೊಳಿಸಿದರು. ಆಸ್ಪತ್ರೆ ಆಪರೇಶನಲ್ ಡೈರೆಕ್ಟರ್ ಯೇನೆಪೊಯ ಅಬ್ದುಲ್ಲಾ ಜಾವೇದ್, ಸಿಇಒ ಡಾ.ಸಿ.ಕೆ.ರಂಜನ್ ಮೊದಲಾದವರಿದ್ದರು.

## ರೇಡಿಯಾಲಜಿ ಸಲಕರಣೆಗಳು

■ ಕ್ಯಾನನ್ ಅಕ್ವಿಲಿಯನ್ ಸ್ಟಾರ್ಟ್ ಸಿಟಿ ಸಿಸ್ಟಂ: ಕಾರ್ಡಿಯಾಕ್ ಸ್ಕ್ಯಾನ್ ಹೊರತುಪಡಿಸಿ ಎಲ್ಲ ರೀತಿಯ ಸ್ಕ್ಯಾನ್, ಇಂಟರ್ವೆನ್ಶನಲ್ ರೇಡಿಯಾಲಜಿ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ■ ಫಿಲಿಪ್ಸ್, ಇಂಜೇನಿಯಾ 1.5 ಟಿ ಎಂಆರ್‌ಐ ಸಿಸ್ಟಂ: ಆಡಿಯೋ ಮತ್ತು ವಿಡಿಯೋ ಸೌಲಭ್ಯಗಳೊಂದಿಗೆ ಈ ಉಪಕರಣವಿದೆ. ■ ಸ್ಯಾಮ್‌ಸಂಗ್ ಎಚ್‌ಎಸ್ 70ಎ ಅಲ್ಟ್ರಾಸೌಂಡ್ ಸಿಸ್ಟಂ: 4ಡಿ ಸ್ಕ್ಯಾನ್‌ನೊಂದಿಗೆ ತೀವ್ರ ಪಿತ್ತಜನಕಾಂಗದ ಕಾಯಿಲೆ ಮತ್ತು ಭ್ರೂಣದ ಚಿತ್ರಣವನ್ನು ಪತ್ತೆಹಚ್ಚಲು ಫೈಬ್ರೊಸ್ಕ್ಯಾನ್ ಸೌಲಭ್ಯ ಹೊಂದಿದೆ. ■ ಡಿಜಿಕ್ಸ್ ಎಕೋ ಡಿಜಿಟಲ್ ಎಕ್ಸ್‌ರೇ ಸಿಸ್ಟಂ: ವ್ಯಾಪಕ ಶ್ರೇಣಿ ಹೊಂದಿರುವ ಅತ್ಯಾಧುನಿಕ ಡಿಜಿಟಲ್ ಎಕ್ಸ್‌ರೇ ಉಪಕರಣ. ■ ಮೆಟಲ್‌ಟೋಸಿಕಾ ಫ್ಲಾಟ್ ಎಸ್‌ಇ ಮ್ಯಾಮೊಗ್ರಾಫರ್-ಸಸ್ತನಿ ಗ್ರಂಥಿಗಳ ಸ್ಪಷ್ಟ ಚಿತ್ರಗಳನ್ನು ತೆಗೆಯಬಲ್ಲ ಹೆಚ್ಚು ಪರಿಣಾಮಕಾರಿ ಉಪಕರಣ.

**VIJAYAVANI(03.06.2021)**

# ಕಮ್ಯುನಿಟಿ ಮೆಡಿಸಿನ್ ತಜ್ಞರ ತಂಡ ರಚನೆ

ಮಂಗಳೂರು: ವಿವಿಧ ಆಸ್ಪತ್ರೆಗಳಲ್ಲಿ ಕೋವಿಡ್-19 ಸೋಂಕಿತರಾಗಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಸ್ಟಿರಾಯ್ಡ್ ಬಳಸಿದವರು ಹಾಗೂ ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವವರು ಬಿಡುಗಡೆ ಹೊಂದಿದ ಬಳಿಕ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾಗದಂತೆ ನಿಗಾ ವಹಿಸಲು ಜಿಲ್ಲೆಯ 8 ವೈದ್ಯಕೀಯ ಮಹಾವಿದ್ಯಾಲಯದ ಕಮ್ಯುನಿಟಿ ಮೆಡಿಸಿನ್ ವಿಭಾಗದ ತಜ್ಞರ ತಂಡವನ್ನು ಜಿಲ್ಲಾಧಿಕಾರಿ ರಚಿಸಿ ಆದೇಶಿಸಿದ್ದಾರೆ. ಆಸ್ಪತ್ರೆಯಿಂದ ಬಿಡುಗಡೆಯಾದವರ 4 ವಾರಗಳ ಕಾಲ ಆರೋಗ್ಯ ಸ್ಥಿತಿ ಮೇಲೆ ತಂಡ ನಿಗಾ ಇರಿಸಲಿದೆ. ಬಂಟ್ವಾಳ ತಾಲೂಕು ಡಾ.ಸಂಜೀವ ಬಿ. (9448114146 [illegible] ಮೆಡಿಕಲ್ ಕಾಲೇಜು, ಮಂಗಳೂರು), ಬೆಳ್ತಂಗಡಿ ತಾಲೂಕು ಡಾ.ಸೌರಭ್ 7026288455 ([illegible]ದರ್ ಮುಲ್ಲರ್ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು), ಪುತ್ತೂರು ತಾಲೂಕು ಡಾ.ನಂಜೇಶ್ (8861373863/9916819243 ಕ್ಷೇಮಾ, ಮಂಗಳೂರು), ಮೂಡುಬಿದಿರೆ ತಾಲೂಕು ಡಾ.ರೇಖಾ (9449082214 ಮಂಗಳೂರು. ಕೆಎಂಸಿ ಮೆಡಿಕಲ್ ಕಾಲೇಜು), ಮಂಗಳೂರು ತಾಲೂಕಿನ ಉಳ್ಳಾಲ ಡಾ.ಪೂನಮ್ ನಾಯ್ಕ್ (7259346643 ಯೇನೆಪೊಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು) ತಂಡದ ಸದಸ್ಯರು.

### 3 ಕಪ್ಪು ಶಿಲೀಂಧ್ರ ಪ್ರಕರಣ ಪತ್ತೆ

**ದ.ಕ ಜಿಲ್ಲೆಯಲ್ಲಿ ಮತ್ತೆ ಮೂರು ಬ್ಲ್ಯಾಕ್ ಫಂಗಸ್ ಪ್ರಕರಣ ಸೇರ್ಪಡೆಯಾಗಿವೆ. ಜಿಲ್ಲೆಯ ಓರ್ವ ಹಾಗೂ ಹೊರ ಜಿಲ್ಲೆಯ ಇಬ್ಬರು ರೋಗಿಗಳು ಬ್ಲ್ಯಾಕ್ ಫಂಗಸ್ ಸಮಸ್ಯೆಯೊಂದಿಗೆ ದಾಖಲಾಗಿದ್ದಾರೆ. ಸದ್ಯ ಜಿಲ್ಲೆಯಲ್ಲಿ 40 ಸಕ್ರಿಯ ಪ್ರಕರಣಗಳಿವೆ. ಬುಧವಾರ ಯಾವುದೇ ಸಾವು ಸಂಭವಿಸಿಲ್ಲ.**

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte,
Mangalore 575 018, Karnataka.

UDAYAVANI 30-06-2021

# ದ.ಕ., ಉಡುಪಿ: 27 ಸಾವಿರ ಮಂದಿಗೆ ಲಸಿಕೆ

ಮಂಗಳೂರು/ಉಡುಪಿ, ಜೂ. 29: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ 15,248 ಮಂದಿಗೆ ಉಡುಪಿ ಜಿಲ್ಲೆಯಲ್ಲಿ 11,761 ಮಂದಿಗೆ ಲಸಿಕೆ ನೀಡಲಾಗಿದೆ.

**ಇಂದು 13,200 ಡೋಸ್ ಲಸಿಕೆ**

ದ.ಕ. ಜಿಲ್ಲೆಗೆ ಬುಧವಾರ 13,200 ಡೋಸ್ ಕೋವಿಶೀಲ್ಡ್ ಲಸಿಕೆ ಬರುವ ಸಾಧ್ಯತೆ ಇದೆ. ಈ ಲಸಿಕೆಯನ್ನು 18 ವರ್ಷ ಮೇಲ್ಪಟ್ಟ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು 2ನೇ ಡೋಸ್ ಫಲಾನುಭವಿಗಳಿಗೆ ನೀಡಲಾಗುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ಮಂಗಳೂರಿಗೆ ಸ್ಪುಟ್ನಿಕ್ ವಿ ಲಸಿಕೆ**

ಕೋವಿಡ್ ನಿರೋಧಕ ಲಸಿಕೆಗಳಾದ ಕೋವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆ ಕರಾವಳಿಯಲ್ಲಿ ಸದ್ಯ ಇದ್ದು, ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ ಕೂಡ ಮಂಗಳವಾರ ಯೇನಪೊಯ ಗ್ರೂಪ್ ಆಫ್ ಹಾಸ್ಪಿಟಲ್‌ಗೆ ಬಂದಿದೆ.

UDAYAVANI (SUDINA) 20-06-2021

# ಜೂ. 21: ವಿವಿಧೆಡೆ ಯೋಗ ದಿನಾಚರಣೆ

**ಮಹಾನಗರ, ಜೂ. 19:** ನಗರದ ವಿವಿಧೆಡೆ ಜೂ. 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜರಗಲಿದೆ.

**ಎಸ್‌ಪಿವೈಎಸ್‌ಎಸ್ ಯೋಗ ಸಮಿತಿ**

ಅಂತಾರಾಷ್ಟ್ರೀಯ ಯೋಗ ದಿನವನ್ನು ಮನೆಮನೆಗಳಲ್ಲಿ ಆಚರಣೆ ಮಾಡಲು ಸಿದ್ಧತೆ ನಡೆದಿದ್ದು, ಎಸ್.ಪಿ.ವೈ.ಎಸ್.ಎಸ್ ಯೋಗ ಸಮಿತಿಯ ವತಿಯಿಂದ ಜೂ. 21ರಂದು ಬೆಳಗ್ಗೆ 7 ಗಂಟೆಗೆ ಮಂಗಳೂರಿನಿಂದ ಯೋಗಾಭ್ಯಾಸ ಮಾಡುವ ನೇರ ಪ್ರಸಾರವನ್ನು ಫೇಸ್‌ಬುಕ್ ಮತ್ತು ಯೂಟ್ಯೂಬ್‌ನಲ್ಲಿ ನೀಡಲಿದ್ದಾರೆ.

ಸಮಿತಿಯ ಅಧಿಕೃತ ಯೂಟ್ಯೂಬ್, ಫೇಸ್‌ಬುಕ್ ನೇರ ಪ್ರಸಾರದಲ್ಲಿ ಯೋಗಾಭ್ಯಾಸ ಮಾಡಲು ಈಗಾಗಲೇ ರಾಜ್ಯಾದ್ಯಂತ ಅನೇಕ ಶಾಲಾ-ಕಾಲೇಜುಗಳು ನೋಂದಾಯಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಕೇಂದ್ರ, ಸಂಸದೀಯ ವ್ಯವಹಾರಗಳ, ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವ ಪ್ರಹ್ಲಾದ್ ಜೋಶಿ, ಬಿ.ಜೆ.ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಯೂಟ್ಯೂಬ್ ಲಿಂಕ್ www.youtube.com/c/SPYSSYOGA ಮತ್ತು https://www.facebook.com/SPYSSYOGA ಫೇಸ್‌ಬುಕ್ ಲಿಂಕ್ ಸಂಪರ್ಕಿಸಬಹುದು ಎಂದು ಪ್ರಕಟನೆ ತಿಳಿಸಿದೆ.

**ಶಕ್ತಿ ವಿದ್ಯಾಸಂಸ್ಥೆ**

ಶಕ್ತಿನಗರದ ಶಕ್ತಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ, ಹೆತ್ತವರಿಗೆ, ಶಿಕ್ಷಕರಿಗೆ ಹಾಗೂ ಶಿಕ್ಷಕೇತರ ಸಿಬಂದಿಗೆ ಜೂ. 21ರಂದು ಆನ್‌ಲೈನ್‌ನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗಿದೆ.

ಅದೇ ದಿನ ಬೆಳಗ್ಗೆ 8:45ಕ್ಕೆ ಯೋಗಾಭ್ಯಾಸ ನಡೆಯಲಿದೆ. ಅನಂತರ ಯೋಗಾಭ್ಯಾಸದ ಮಹತ್ವದ ಕುರಿತಂತೆ ಮಂಗಳೂರು ವಿ.ವಿ.ಯ ಯೋಗ ವಿಜ್ಞಾನ ವಿಭಾಗದ ಅಧ್ಯಕ್ಷ ಹಾಗೂ ಪ್ರಾಧ್ಯಾಪಕ ಡಾ| ಕೃಷ್ಣ ಶರ್ಮ ಮಾರ್ಗದರ್ಶನ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಶಕ್ತಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸಂಜೀತ್ ನಾೖಕ್ ವಹಿಸಲಿದ್ದಾರೆ. ಸಂಸ್ಥೆಯ ಆಡಳಿತಾಧಿಕಾರಿ ಡಾ| ಕೆ.ಸಿ. ನಾೖಕ್, ಪ್ರಧಾನ ಸಲಹೆಗಾರ ರಮೇಶ ಕೆ., ಅಭಿವೃದ್ಧಿ ಅಧಿಕಾರಿ ಪ್ರಖ್ಯಾತ್ ರೈ, ಶಕ್ತಿ ಪ.ಪೂ. ಕಾಲೇಜಿನ ಪ್ರಾಂಶುಪಾಲ ಟಿ. ರಾಜರಾಮ್ ರಾವ್, ಶಕ್ತಿ ರೆಸಿಡೆನ್ಶಿಯಲ್ ಶಾಲೆ ಪ್ರಾಂಶುಪಾಲೆ ವಿದ್ಯಾ ಜಿ. ಕಾಮತ್, ಶಕ್ತಿ ಪೂರ್ವ ಪ್ರಾಥಮಿಕ ಶಾಲೆ ಸಂಯೋಜಕಿ ನೀಮಾ ಸಕ್ಸೇನಾ ಉಪಸ್ಥಿತರಿರುತ್ತಾರೆ.

**ಬಿಜೆಪಿ ವತಿಯಿಂದ ವೃಕ್ಷಾರೋಪಣ**

ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಜೂ. 21ರಂದು ಬಿಜೆಪಿ ಆಶ್ರಯದಲ್ಲಿ 9 ಮಂಡಲಗಳಲ್ಲಿ ಕೋವಿಡ್ ನಿಯಮ ಪಾಲಿಸಿಕೊಂಡು ಯೋಗ ದಿನಾಚರಣೆ ನಡೆಯಲಿದೆ. ಜನಸಂಘದ ಸ್ಥಾಪಕ ಡಾ| ಶ್ಯಾಮ್ ಪ್ರಸಾದ್ ಮುಖರ್ಜಿಯವರ ಬಲಿದಾನ ದಿವಸ ಜೂ. 23ರಿಂದ, ಅವರ ಜನ್ಮ ದಿನ ಜು. 6ರ ವರೆಗೆ ಬಿಜೆಪಿ ಕಾರ್ಯಕರ್ತರು ಪ್ರತಿ ಬೂತ್‌ನಲ್ಲಿ 'ವೃಕ್ಷಾರೋಪಣ' ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುದರ್ಶನ ಎಂ. ಪ್ರಕಟನೆಯಲ್ಲಿ ತಿಳಿಸಿದ್ದಾರೆ.

**ಯೇನೆಪೊಯ ವಿವಿ**

ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಯೇನಪೊಯ (ಪರಿಗಣಿಸಲ್ಪಟ್ಟ ವಿ.ವಿ.) ಹಾಗೂ ಆವಿಷ್ಕಾರ ಯೋಗ ಸಹಯೋಗದಲ್ಲಿ ಜೂ. 21ರಂದು ಬೆಳಗ್ಗೆ 6.30ರಿಂದ 7.30ರ ವರೆಗೆ ಯೋಗ ದಿನದ ಶಿಷ್ಟಾಚಾರದ ಯೋಗಭ್ಯಾಸವು ವರ್ಚುವಲ್ ವೇದಿಕೆ ಮೂಲಕ ನಡೆಯಲಿದೆ (ಯೂಟ್ಯೂಬ್ ಲಿಂಕ್ https://youtu.be/-oW5zomdYCA) ಯೋಗ ಗುರು ಕುಶಾಲಪ್ಪ ಗೌಡ ಅವರು ಯೋಗಾಭ್ಯಾಸದ ತರಬೇತಿ ನಡೆಸಿಕೊಡಲಿದ್ದಾರೆ.

ಯೇನಪೊಯ ವಿ.ವಿ. ವತಿಯಿಂದ ಬೆಳಗ್ಗೆ 10 ಗಂಟೆಗೆ ಯೋಗದಿನದ ಸಭಾ ಕಾರ್ಯಕ್ರಮ ನಡೆಯಲಿದೆ. ಆಧುನಿಕ ಜೀವನದಲ್ಲಿ ಯೋಗ ವಿಜ್ಞಾನದ ಪಾತ್ರ ಎಂಬ ವಿಷಯದ ಬಗ್ಗೆ ಮಂಗಳೂರು ವಿ.ವಿ. ಮಾನವ ಪ್ರಜ್ಞೆ ಹಾಗೂ ಯೋಗ ವಿಜ್ಞಾನ ವಿಭಾಗದ ನಿವೃತ್ತ ಪ್ರೊಫೆಸರ್ ಡಾ| ಕೆ. ಕೃಷ್ಣ ಭಟ್ ಅತಿಥಿ ಉಪನ್ಯಾಸ ನೀಡಲಿದ್ದಾರೆ.

ಆದಿಚುಂಚನಗಿರಿ ಮಹಾವಿದ್ಯಾಲಯ, ಮಂಡ್ಯ ಉಪಕುಲಪತಿ ಡಾ| ಎಸ್. ಚಂದ್ರಶೇಖರ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು. ಯೇನಪೊಯ (ಪರಿಗಣಿಸಲ್ಪಟ್ಟ ವಿ.ವಿ.) ಉಪಕುಲಪತಿ ಡಾ| ಎಂ. ವಿಜಯ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮವು ಗೂಗಲ್ ಮೀಟ್ https://meet.google.com/zuh-eeyq-sxs ಹಾಗೂ https://youtu.be/qCPByvQki-Q ಯೇನಪೊಯ ಯೂಟ್ಯೂಬ್‌ನಲ್ಲಿ ನೇರಪ್ರಸಾರವಾಗಲಿದೆ. ಎರಡೂ ಕಾರ್ಯಕ್ರಮಕ್ಕೂ ಸಾರ್ವಜನಿಕರಿಗೆ ಉಚಿತ ಪ್ರವೇಶವಿರುವುದು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

VARTHABHARATI 30-06-2021

# ಯೆನೆಪೊಯದಲ್ಲಿ ‘ಸ್ಪುಟ್ನಿಕ್-ವಿ’ ಲಸಿಕೆ ಲಭ್ಯ

ಮಂಗಳೂರು, ಜೂ.29: ಯೆನೆಪೊಯ ಸಂಸ್ಥೆಯು ಅಂತರ್‌ರಾಷ್ಟ್ರೀಯವಾಗಿ ಅನುಮೋದಿತವಾಗಿರುವ ರಶ್ಯದ ‘ಸ್ಪುಟ್ನಿಕ್-ವಿ’ ಕೋವಿಡ್-19 ಲಸಿಕೆಯನ್ನು ನೀಡುವ ಅನುಮತಿ ಪಡೆದಿದೆ ಎಂದು ಸಂಸ್ಥೆಯ ಪ್ರಕಟನೆ ತಿಳಿಸಿದೆ.

ಯೆನೆಪೊಯ ಸಂಸ್ಥೆಯು ‘ಸ್ಪುಟ್ನಿಕ್-ವಿ’ ಲಸಿಕೆ ನೀಡುವ ಕರ್ನಾಟಕದ ಪ್ರಥಮ ಆರೋಗ್ಯ ಸಂಸ್ಥೆಗಳಲ್ಲಿ ಒಂದಾಗಿದ್ದು, ದೇರಳಕಟ್ಟೆ, ಯೆನೆಪೊಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಹಾಗೂ ಮಂಗಳೂರಿನಲ್ಲಿರುವ ಯೆನೆಪೊಯ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸೂಕ್ತವಾದ ಸುರಕ್ಷತ ಮಾರ್ಗಸೂಚಿಗಳನ್ನು ಅನುಸರಿಸಿ ಫಲಾನುಭವಿಗಳಿಗೆ ಲಸಿಕೆ ಪಡೆಯಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸರಕಾರ ಅನುಮೋದಿಸಿದ ದರಗಳಲ್ಲಿ ಲಸಿಕೆ ಲಭ್ಯವಿರುತ್ತದೆ ಎಂದು ಸಂಸ್ಥೆಯ ಪ್ರಕಟನೆ ತಿಳಿಸಿದೆ.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

VIJAYAKARNATAKA (Namma Kudla)16-08-2021

ಸ್ವಾತಂತ್ರ್ಯೋತ್ಸವ ಸಂದೇಶ ನೀಡಿದ ದ.ಕ. ಉಸ್ತುವಾರಿ ಸಚಿವ ಅಂಗಾರ

# ಜನತೆಯ ಆರೋಗ್ಯಕ್ಕೆ ಪ್ರಥಮ ಆದ್ಯತೆ

**ವಿಕ ಸುದ್ದಿಲೋಕ** ಮಂಗಳೂರು

ಕೋವಿಡ್ ನಿಯಂತ್ರಣಕ್ಕೆ ಈಗಾಗಲೇ ಜಿಲ್ಲೆಯ 12,56,821 ಜನರಿಗೆ ಉಚಿತ ಲಸಿಕೆ ನೀಡಲಾಗಿದೆ. ಜಿಲ್ಲಾ ವೆನ್ಲಾಕ್ ಆಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿಯೊಂದಿಗೆ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಿಸಿ-ಆಕ್ಸಿಜನ್ ಪೂರೈಕೆಯೊಂದಿಗೆ- ಜನೌಷಧಿ ಕೇಂದ್ರಗಳ ಮೂಲಕ ಜನತೆಯ ಆರೋಗ್ಯಕ್ಕೆ ಪ್ರಥಮ ಆದ್ಯತೆ ಕೊಡಲಾಗಿದೆ ಎಂದು ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಎಸ್. ಅಂಗಾರ ಹೇಳಿದರು.

ನಗರದ ನೆಹರೂ ಮೈದಾನದಲ್ಲಿ ದಕ ಜಿಲ್ಲಾಡಳಿತ ವತಿಯಿಂದ ಭಾನುವಾರ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಸಂದೇಶ ನೀಡಿದರು.

ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ 23.5 ಕೋಟಿ ರೂ. ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಮೆಡಿಸಿನ್ ಬ್ಲಾಕ್, 35.2 ಕೋಟಿ ವೆಚ್ಚದಲ್ಲಿ ಸೂಪರ್ ಸ್ಪೆಷಲ್ ಸರ್ಜಿಕಲ್ ಬ್ಲಾಕ್, 3.9 ಕೋಟಿ ರೂ. ವೆಚ್ಚದಲ್ಲಿ ಐಸಿಯು ಬೆಡ್-ಮಕ್ಕಳಿಗಾಗಿ ಸ್ಪೆಷಲ್ ಬ್ಲಾಕ್, 132 ವೆಂಟಿಲೇಟರ್, 500 ಬೆಡ್‌ನ ಸೆಂಟರ್ ಆಕ್ಸಿಜನ್ ವ್ಯವಸ್ಥೆ ಇತ್ಯಾದಿ ಸೇವೆಗಳು ಸಿದ್ಧವಾಗಿದೆ ಎಂದರು.

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಸರಕಾರ ಕಾಲಕಾಲಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮಾನವ ಜೀವಹಾನಿ, ಜಾನುವಾರು, ಮನೆ, ಕೃಷಿ ಹಾನಿಗಳಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪರಿಹಾರ ಒದಗಿಸಲಾಗಿದೆ. ಪ್ರವಾಹ ಹಾನಿಗೊಳಗಾದ ರಸ್ತೆ, ಶಾಲೆ, ಸೇತುವೆ ಇತ್ಯಾದಿ 16.59 ಕೋಟಿ ರೂ. ಅನುದಾನದಲ್ಲಿ 584 ಕಾಮಗಾರಿ ಅನುಷ್ಠಾನಗೊಳಿಸಿದೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮೂಲಕ 65 ಕಾಲು ಸಂಕ, 10 ಮೀನು ಮಾರುಕಟ್ಟೆ, 12 ತಡೆಗೋಡೆ, 3 ಥೀಮ್ ಪಾರ್ಕ್, 13 ಸಮುದಾಯ ಭವನ ನಿರ್ಮಾಣವಾಗಿದೆ.

ಸಾಂಸ್ಕೃತಿಕವಾಗಿ ಜಿಲ್ಲಾ ರಂಗ ಮಂದಿರ, ತುಳು ಭವನ, ಬ್ಯಾರಿ ಭವನ, ಕೊಂಕಣಿ ಭವನ ಹಾಗೂ ಸಾಂಸ್ಕೃತಿಕ ಭವನ ನಿರ್ಮಾಣಗೊಳ್ಳುತ್ತಿದೆ. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ವಿದ್ಯಾರ್ಥಿ ನಿಲಯಗಳಿಗಾಗಿ ಸುಮಾರು 23 ಕೋಟಿ ರೂ. ವೆಚ್ಚ ಮಾಡಲಾಗಿದೆ. 73.37 ಲಕ್ಷ ರೂ. ವಿದ್ಯಾರ್ಥಿ ವೇತನ ಒದಗಿಸಲಾಗಿದೆ. ಎಂಟು ಸರಕಾರಿ ಕಾಲೇಜುಗಳಿಗೆ 7.35 ಕೋಟಿ ರೂ. ವೆಚ್ಚದಲ್ಲಿ ಕೊಠಡಿ ನಿರ್ಮಾಣ ಪ್ರಾರಂಭವಾಗಿದೆ ಎಂದು ಸಚಿವ ಅಂಗಾರ ಹೇಳಿದರು.

ಪರೇಡ್ ಕಮಾಂಡರ್ ಈರ ಸಂಗಪ್ಪ ಶೀತಳ್ಳಿ ಅವರ ಬೆಂಗಾವಿನ ತೆರೆದ ಜೀಪ್‌ನಲ್ಲಿ ಸಚಿವರು ಪರೇಡ್ ವೀಕ್ಷಿಸಿದರು. ಪೊಲೀಸ್ ವಾದ್ಯ ವೃಂದದ ಮೂರು ತಂಡಗಳು, ಪೊಲೀಸ್ ವಿವಿಧ ಘಟಕಗಳು ಹಾಗೂ ಅಗ್ನಿಶಾಮಕ ತಂಡದಿಂದ ಸಚಿವರಿಗೆ ಗೌರವ ರಕ್ಷೆ ಸಲ್ಲಿಸಲಾಯಿತು.

ಶಾಸಕರಾದ ವೇದವ್ಯಾಸ ಡಿ. ಕಾಮತ್, ಯು.ಟಿ. ಖಾದರ್, ವಿಧಾನ ಪರಿಷತ್ ಸದಸ್ಯ ಹರೀಶ್ ಕುಮಾರ್, ಮೇಯರ್ ಪ್ರೇಮಾನಂದ ಶೆಟ್ಟಿ, ಉಪಮೇಯರ್ ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ, ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ. ಅಧ್ಯಕ್ಷ ಸಂತೋಷ್ ರೈ ಬೋಳಿಯಾರ್, ರಾಜ್ಯ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ನಿತಿನ್ ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ್ ಕುಮಾರ ಕಲ್ಕೂರ, ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ., ಐಜಿಪಿ ದೇವಜ್ಯೋತಿ ರೇ, ಪೊಲೀಸ್ ಆಯುಕ್ತ ಶಶಿಕುಮಾರ್, ಡಿಸಿಪಿ ಹರಿರಾಂ ಶಂಕರ್, ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ ಅಕ್ಷಯ್ ಶ್ರೀಧರ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪ್ರಜ್ಞಾ ಅಮ್ಮೆಂಬಳ ಮತ್ತಿತರ ಜನಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.



## ಮುಖ್ಯಮಂತ್ರಿಗಳ ಪದಕ ಪ್ರದಾನ, ಸನ್ಮಾನ





ಅತ್ಯುತ್ತಮ ಸೇವೆಗಾಗಿ ಹೋಂಗಾರ್ಡ್‌ನ ಮನ್ಸೂರ್ ಹಳೆಯಂಗಡಿ ಅವರಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಲಾಯಿತು. ಕೋವಿಡ್ ಸಂದರ್ಭ ಉತ್ತಮ ಕಾರ್ಯನಿರ್ವಹಣೆಗಾಗಿ ಯೆನೆಪೋಯ ಆಸ್ಪತ್ರೆ, ಪರವಾಗಿ ಪ್ರಕಾಶ್ ಎಂ. ಸಲ್ದಾನ ಮತ್ತು ಸರಕಾರಿ ವೆನ್ಲಾಕ್ ಆಸ್ಪತ್ರೆ ಅಧೀಕ್ಷಕ ಡಾ.ಸದಾಶಿವ ಶಾನುಭಾಗ್ ಅವರನ್ನು ಸನ್ಮಾನಿಸಲಾಯಿತು.

APPEARED IN VIJAYAKARNATAKA 11-08-2021

# ರಕ್ತದಾನದಲ್ಲಿ ಅಪೂರ್ವ ಸಾಧನೆ

## ಬ್ಲಡ್ ಹೆಲ್ಪ್‌ಲೈನ್‌ನಿಂದ ಏಕಕಾಲದಲ್ಲಿ 23 ಶಿಬಿರ । 603 ಯುನಿಟ್ ರಕ್ತ ಸಂಗ್ರಹ

■ ಮುಹಮ್ಮದ್ ಆರಿಫ್
ಮಂಗಳೂರು
mahammed.arif@times-group.com

ಮಂಗಳೂರು ಮೂಲದ ಬ್ಲಡ್ ಹೆಲ್ಪ್‌ಲೈನ್ ಕರ್ನಾಟಕ ಸಂಸ್ಥೆಯು ತನ್ನ ಐದನೇ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದೆ. ರಾಜ್ಯಾದ್ಯಂತ ನಾನಾ ನಗರಗಳ 21 ರಕ್ತನಿಧಿಗಳಲ್ಲಿ ಏಕಕಾಲಕ್ಕೆ ರಕ್ತದಾನ ಶಿಬಿರಗಳನ್ನು ಆಯೋಜಿಸಿ, 603 ಯುನಿಟ್ ರಕ್ತ ಸಂಗ್ರಹ ಮಾಡುವ ಮೂಲಕ ಅಪೂರ್ವ ಸಾಧನೆ ಮಾಡಿದೆ.

ಕೋವಿಡ್- 19 ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜ್ಯದ ರಕ್ತ ನಿಧಿಗಳಲ್ಲಿ ರೋಗಿಗಳಿಗೆ ರಕ್ತದ ಅಭಾವವನ್ನು ಮನಗಂಡು, ವೀಕೆಂಡ್ ಕರ್ಫ್ಯೂ ಹಾಗೂ ಲಸಿಕಾ ಅಭಿಯಾನದ ಹೊರತಾಗಿಯೂ ನಡೆಸಿದ ರಕ್ತದಾನ ಶಿಬಿರ ಯಶಸ್ಸು ಕಂಡಿದೆ. ಸಂಘಟನೆಯ ಕಾರ್ಯಕರ್ತರು ಸೇರಿದಂತೆ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಬಂದು ರಕ್ತದಾನ ಮಾಡಿದ್ದಾರೆ.



ಐದು ವರ್ಷಗಳ ಹಿಂದೆ ಸ್ಥಾಪನೆಗೊಂಡು ರಕ್ತದಾನದಲ್ಲಿ ತೊಡಗಿಸಿಕೊಂಡಿರುವ ಸಂಘಟನೆಯು ಇದೀಗ ಏಕಕಾಲದಲ್ಲಿ 21 ರಕ್ತದಾನ ಶಿಬಿರಗಳನ್ನು ಮಾಡಿ, 603 ಯುನಿಟ್ ರಕ್ತ ಸಂಗ್ರಹ ಮಾಡಿದೆ. ಇದರ ಯಶಸ್ಸಿನಲ್ಲಿ ಹಲವು ಸಂಘಟನೆಗಳು, ಆಸ್ಪತ್ರೆಗಳ ರಕ್ತನಿಧಿಗಳು, ರಕ್ತದಾನಿಗಳ ಸಹಯೋಗವಿದೆ. ಹಲವು ಜೀವಗಳನ್ನು ಉಳಿಸಲು ನೆರವಾದ ಸಂತೃಪ್ತಿ ನಮ್ಮದು.
**- ಸಿರಾಜುದ್ದೀನ್ ಪರ್ಲಡ್ಕ**, ವ್ಯವಸ್ಥಾಪಕರು, ಬ್ಲಡ್ ಹೆಲ್ಪ್‌ಲೈನ್ ಕರ್ನಾಟಕ.

**ಎಲ್ಲೆಲ್ಲಿ ಶಿಬಿರ:** ಬೆಂಗಳೂರಿನಲ್ಲಿ ಹೆಣ್ಣೂರು ಕ್ರಾಸ್ ಮತ್ತು ಜೆ.ಪಿ.ನಗರದ ಲಯನ್ಸ್ ರಕ್ತ ನಿಧಿಯೊಂದಿಗೆ- 55 ಯುನಿಟ್, ಮೈಸೂರು ಲಯನ್ಸ್ ಜೀವಾಧಾರ ರಕ್ತ ನಿಧಿಯಲ್ಲಿ- 20, ಮಡಿಕೇರಿ ಜಿಲ್ಲಾಸ್ಪತ್ರೆ ರಕ್ತ ನಿಧಿಯಲ್ಲಿ ಕೊಡಗು ಬ್ಲಡ್ ಡೋನರ್ಸ್ ಸಹಕಾರದೊಂದಿಗೆ- 11, ಹಾಸನ ರಕ್ತನಿಧಿಯಲ್ಲಿ- 24, ಪುತ್ತೂರು ರೋಟರಿ ಕ್ಯಾಂಪ್ಕೊ ಬ್ಲಡ್ ಬ್ಯಾಂಕ್- 50, ಮೂಡುಬಿದಿರೆ ಆಳ್ವಾಸ್ ಆಸ್ಪತ್ರೆ ರಕ್ತನಿಧಿಯಲ್ಲಿ ಬ್ಲಡ್ ಡೋನರ್ಸ್ ಹೆಲ್ಪ್‌ಲೈನ್ ಸಹಕಾರದೊಂದಿಗೆ- 15, ಮಣಿಪಾಲ ಕೆಎಂಸಿ ಆಸ್ಪತ್ರೆ ರಕ್ತನಿಧಿಯಲ್ಲಿ ಟೀಂ ಯುನೈಟೆಡ್ ಉಡುಪಿ ಸಹಕಾರ- 25, ಮಂಗಳೂರಿನ ಯೆನೆಪೋಯ ಆಸ್ಪತ್ರೆ ರಕ್ತನಿಧಿಯಲ್ಲಿ ಸೌಹಾರ್ದ ಫ್ರೆಂಡ್ಸ್ ಅಮ್ಮುಂಜೆ ಸಹಕಾರ-104 ಯುನಿಟ್ ಸಂಗ್ರಹವಾಗಿದೆ.

ದೇರಳಕಟ್ಟೆ ಕೆ.ಎಸ್.ಹೆಗ್ಡೆ ರಕ್ತನಿಧಿ- 36, ಕಣಚೂರು ಆಸ್ಪತ್ರೆ ರಕ್ತನಿಧಿ- 30, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ರಕ್ತನಿಧಿ- 60, ಎ.ಜೆ ಆಸ್ಪತ್ರೆ ರಕ್ತನಿಧಿ- 13, ವೆನ್ಲಾಕ್ ಜಿಲ್ಲಾಸ್ಪತ್ರೆ ರಕ್ತನಿಧಿ- 26, ಕೆಎಂಸಿ ಆಸ್ಪತ್ರೆ ರಕ್ತನಿಧಿಯಲ್ಲಿ ಮೋಮ್ ಗ್ರೂಪ್- 43, ಫಾದರ್ ಮುಲ್ಲರ್ ಆಸ್ಪತ್ರೆ ರಕ್ತನಿಧಿ- 32, ತೇಜಸ್ವಿನಿ ಆಸ್ಪತ್ರೆ ಲಯನ್ಸ್ ರಕ್ತನಿಧಿ- 21, ಶ್ರೀನಿವಾಸ್ ಆಸ್ಪತ್ರೆ ರಕ್ತನಿಧಿ- 07, ಬಿಜಾಪುರ ಡಾ. ಗೌಡರ್ಸ್ ರಕ್ತ ನಿಧಿ- 10, ರಾಯಚೂರು ಬ್ಲಡ್ ಬ್ಯಾಂಕ್- 14 ಯುನಿಟ್, ಕುಂದಾಪುರದ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ರಕ್ತನಿಧಿ- 07 ಯುನಿಟ್ ರಕ್ತ ಸಂಗ್ರಹವಾಗಿದೆ.

**12 ಸಾವಿರ ಯುನಿಟ್:** 2016ರ ಆ.8ರಂದು ವಾಟ್ಸ್‌ಆ್ಯಪ್ ಮೂಲಕ ಸ್ಥಾಪನೆಗೊಂಡು ಐದು ವರ್ಷಗಳನ್ನು ಪೂರೈಸಿರುವ ಸಂಸ್ಥೆಯು, ಇಷ್ಟರ ತನಕ ಒಟ್ಟು 12,581 ಯುನಿಟ್ ರಕ್ತ ಸಂಗ್ರಹಿಸಿ ರಕ್ತ ನಿಧಿಗಳಿಗೆ ಪೂರೈಕೆ ಮಾಡುವಲ್ಲಿ ಯಶಸ್ವಿಯಾಗಿದೆ. 177 ಸಂಘಟನೆಗಳು ಮತ್ತು 26 ಆಸ್ಪತ್ರೆ ರಕ್ತನಿಧಿಗಳ ಸಹಯೋಗದೊಂದಿಗೆ 179 ಶಿಬಿರ ಆಯೋಜಿಸಿ, 10,462 ಯುನಿಟ್ ರಕ್ತ ಸಂಗ್ರಹಿಸಿದೆ. ತುರ್ತು ಸಂದರ್ಭಗಳಲ್ಲಿ ನೇರವಾಗಿ 2119 ಮಂದಿಗೆ ರಕ್ತನಿಧಿಗಳ ಮೂಲಕ ದಾನಿಗಳನ್ನು ಪೂರೈಸಿ ನೆರವಾಗಿದೆ. ಕೋವಿಡ್-19 ಪ್ರಥಮ 76 ದಿನದ ಲಾಕ್‌ಡೌನ್ ಸಂದರ್ಭದಲ್ಲಿ ರಾಜ್ಯಾದ್ಯಂತ 672 ರಕ್ತದಾನಿಗಳನ್ನು ನೇರವಾಗಿ ರಕ್ತನಿಧಿಗಳಿಗೆ ಪೂರೈಸಿದೆ.

ATTESTED
Dr. Gangadhara Somayaji K.S.
Registrar
Yenepoya (Deemed to be University)
University Road, Deralakatte
Mangalore 575018, Karnataka.

VIJAYAKARNATAKA 30-06-2021

# ಕರಾವಳಿಗೆ ಬಂತು ಸ್ಪುಟ್ನಿಕ್ ವಿ

**ಮಂಗಳೂರು:** ಕೋವಿಡ್ ನಿರೋಧಕ ಲಸಿಕೆ ಕೋವಿಶೀಲ್ಡ್, ಕೋವ್ಯಾಕ್ಸಿನ್ ಬಳಿಕ ಈಗ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ ಮೊದಲ ಬಾರಿ ಮಂಗಳವಾರ ಕರಾವಳಿಗೆ ಬಂದಿದೆ.

ನಗರದ ಯೆನೆಪೋಯ ಗ್ರೂಪ್ ಆಫ್ ಹಾಸ್ಪಿಟಲ್‌ಗೆ ಸ್ಪುಟ್ನಿಕ್ ಲಸಿಕೆ ಬಂದಿದ್ದು, ವಿಶೇಷವಾಗಿ ಮೊದಲ ಹಂತದಲ್ಲಿ 1200 ಡೋಸ್ ಲಸಿಕೆಯನ್ನು ಆಸ್ಪತ್ರೆಗೆ ತರಲಾಗಿದೆ. ಮತ್ತೆರಡು ದಿನಗಳ ಬಳಿಕ ಮತ್ತೆ 3600 ಲಸಿಕೆ ಮಂಗಳೂರಿಗೆ ಬರುವ ಸಾಧ್ಯತೆಯಿದೆ ಎಂದು ಆಸ್ಪತ್ರೆಯ ಮೂಲಗಳು ಮಾಹಿತಿ ನೀಡಿದೆ.

ಜಿಲ್ಲೆಯ ಆರ್‌ಸಿಎಚ್ ಅಧಿಕಾರಿ ಡಾ. ರಾಜೇಶ್ ಹೇಳುವಂತೆ ಯೆನೆಪೋಯ ಗ್ರೂಪ್ ಆಫ್ ಹಾಸ್ಪಿಟಲ್‌ಗಳು ತಾವೇ ನೇರವಾಗಿ ಈ ಲಸಿಕೆಯನ್ನು ತರುವ ಕಾರ್ಯವನ್ನು ಮಾಡಿದೆ. ಆರೋಗ್ಯ ಇಲಾಖೆಯ ಮೂಲಕವೇ ಸೆಶನ್‌ಗಳನ್ನು ನಿರ್ಧಾರ ಮಾಡಲಾಗುತ್ತಿದ್ದು, ಗುರುವಾರದ ಬಳಿಕ ನೀಡುವ ವ್ಯವಸ್ಥೆ ಮಾಡಲಾಗುತ್ತದೆ.

Appeared in UDAYAVANI on 02-08-2020

## ಯೇನಪೊಯ ಆಸ್ಪತ್ರೆಯ ವೈದ್ಯರ ಸಾಧನೆ

# ರೈತನ ಜೀವ ಉಳಿಸಿದ ಹೃದಯ ಶಸ್ತ್ರಚಿಕಿತ್ಸೆ



ಗುಣಮುಖನಾದ ವ್ಯಕ್ತಿಯೊಂದಿಗೆ ಹೃದ್ರೋಗ ಚಿಕಿತ್ಸಕರ ತಂಡ.

ಮಂಗಳೂರು, ಆ. 1: ರೋಗಿಯ ಸೀಳಿದ ಮಹಾಪಧಮನಿ (ಅಯಾರ್ಟಿಕ್ ಡಿಸೆಕ್ಷನ್)ಯನ್ನು ಕ್ಲಿಷ್ಟಕರವಾದ ಹೃದಯದ ಶಸ್ತ್ರಚಿಕಿತ್ಸೆಯ ಮೂಲಕ ನಗರದ ಯೇನಪೊಯ ಆಸ್ಪತ್ರೆಯ ವೈದ್ಯರು ರೈತರೊಬ್ಬರಿಗೆ ಜೀವದಾನ ಮಾಡಿದ್ದಾರೆ.

ಅಯಾರ್ಟಿಕ್ ಡಿಸೆಕ್ಷನ್ ಒಂದು ಅಪರೂಪದ ಹಾಗೂ ಗಂಭೀರವಾದ ಸ್ಥಿತಿ. ಪ್ರತಿ ವರ್ಷ 1 ಲಕ್ಷ ಜನರಲ್ಲಿ ಇಬ್ಬರಿಂದ ಮೂವರಲ್ಲಿ ಕಂಡುಬರುತ್ತದೆ. ಈ ರೋಗದಲ್ಲಿ ಮಹಾಪಧಮನಿಯ ಒಳಪದರವು ಸೀಳಿ, ಮಧ್ಯಮ ಹಾಗೂ ಒಳಪದರದ ನಡುವಿನಲ್ಲಿ ರಕ್ತವು ಚಲಿಸಿ ಈ ಪದರಗಳು ಬೇರ್ಪಡುತ್ತವೆ. ಇದನ್ನು ಆರಂಭದಲ್ಲೇ ಪತ್ತೆಹಚ್ಚಿ ಸರಿಪಡಿಸದಿದ್ದಲ್ಲಿ ಮಾರಣಾಂತಿಕವಾಗಿರುತ್ತದೆ.

ಮಂಗಳೂರು ಸಮೀಪದ 55ರ ಹರೆಯದ ರೈತರೊಬ್ಬರಿಗೆ ಎದೆ ಮತ್ತು ಬೆನ್ನು ನೋವು ಕಾಣಿಸಿಕೊಂಡ ಕಾರಣ ವೈದ್ಯರನ್ನು ಸಂಪರ್ಕಿಸಿದರು. ಸಿಟಿ ಸ್ಕ್ಯಾನ್‌ನಲ್ಲಿ ಅಯಾರ್ಟಿಕ್ ಡಿಸೆಕ್ಷನ್ ಸಮಸ್ಯೆ ಕಂಡುಬಂತು. ಹಿರಿಯ ಹೃದ್ರೋಗ ತಜ್ಞ ಡಾ| ಆರ್.ಎಲ್. ಕಾಮತ್ ಅವರಲ್ಲಿ ಮರುತಪಾಸಣೆ ನಡೆಸಿದ ಬಳಿಕ ಕೊಡಿಯಾಲ್‌ಬೈಲ್‌ನಲ್ಲಿರುವ ಯೇನಪೊಯ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಶಸ್ತ್ರಕ್ರಿಯೆಗೊಳಗಾಗುವಂತೆ ಸೂಚಿಸಿದರು. ಯೇನಪೊಯದ ಹಿರಿಯ ಹೃದ್ರೋಗ ಶಸ್ತ್ರಚಿಕಿತ್ಸಾ ತಜ್ಞ ಡಾ| ಶಕ್ತಿವೇಲು ಅವರು ಡಾ| ಗಣೇಶ ಕಾಮತ್, ಹೃದ್ರೋಗ ಅರಿವಳಿಕೆ ತಜ್ಞ ಡಾ| ಮೋಹನದಾಸ್ ಬಿ.ಎಸ್. ಹಾಗೂ ಡಾ| ಕೃಷ್ಣಪ್ರಸಾದ್ ಅವರ ಸಹಯೋಗದೊಂದಿಗೆ ಸತತ 12 ತಾಸುಗಳ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಈ ಸಂದರ್ಭ ರಕ್ತ ಪರಿಚಲನೆಯನ್ನು ಸ್ಥಗಿತಗೊಳಿಸುವ ಕ್ರಿಯೆಯನ್ನು ಪರ್ಫ್ಯೂಷನಿಸ್ಟ್‌ಗಳಾದ ಅಂಜು ಮತ್ತು ಅಜಲ್ ನೆರವೇರಿಸಿದರು.

**ಸಮರ್ಥರ ತಂಡ**

ವೈದ್ಯಕೀಯ ನಿರ್ದೇಶಕ ಡಾ| ತಾಹಿರ್ ಮಾತನಾಡಿ, 'ನುರಿತ ಹೃದ್ರೋಗ ಚಿಕಿತ್ಸಕರ ತಂಡ ಹಾಗೂ ಅತ್ಯಾಧುನಿಕ ಮೂಲ ಸೌಕರ್ಯದೊಂದಿಗೆ ಆಸ್ಪತ್ರೆಯು ಎಲ್ಲ ರೀತಿಯ ಹೃದಯ ಶಸ್ತ್ರ ಚಿಕಿತ್ಸೆ ಉತ್ತಮ ಫಲಿತಾಂಶದೊಂದಿಗೆ ನಿರ್ವಹಿಸಲು ಸಮರ್ಥವಾಗಿದೆ ಎಂದರು.

Appeared in Varthabharathi on 09-07-2020

# ಯೆನೆಪೊಯದಿಂದ ಹಿರಿಯರಿಗಾಗಿ ಆನ್‌ಲೈನ್ ಕಾರ್ಯಕ್ರಮ

ಮಂಗಳೂರು, ಜು.8: ಯೆನ್ ಸಿನಿಯರ್ ಕೇರ್ ಫಾರ್ ಆ್ಯಕ್ಟೀವ್ ಏಜಿಂಗ್ ಎಂಬ ಆನ್‌ಲೈನ್ ಕಾರ್ಯಕ್ರಮವನ್ನು 14 ವಾರಗಳ ಮಾನಸಿಕ/ಅರಿವಿನ ವಿಕಾಸಕ್ಕಾಗಿ ಕೈಗೊಳ್ಳಲಾಗಿದ್ದು, ಯೆನೆಪೊಯ ಯುನಿವರ್ಸಿಟಿಯ ಪ್ರೊ-ವೈಸ್ ಚಾನ್ಸಲರ್ ಸಿ.ವಿ.ರಘುವೀರ್ ಮತ್ತು ರಿಜಿಸ್ಟ್ರಾರ್ ಡಾ.ಗಂಗಾಧರ್ ಸೋಮಾಯಾಜಿ ಉದ್ಘಾಟಿಸಿದರು.

ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್‌ನ ಒಕ್ಯುಪೇಶನಲ್ ಥೆರಪಿಯ ಪ್ರೊ. ಡಾ.ಸೆಬೆಸ್ಟಿನ್ ಅನಿತಾ ಡಿಸೋಜ 'ಮೆದುಳಿಗೆ ವಯಸ್ಸಾಗುವುದನ್ನು ತಡೆಯಲು ಔದ್ಯೋಗಿಕ ಚಿಕಿತ್ಸೆ' ಕುರಿತು ಮಾತನಾಡಿದರು.

ಯೆನೆಪೊಯ ಯುನಿವರ್ಸಿಟಿಯ ಡಾ.ಪ್ರಭಾ ಅಧಿಕಾರಿ ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಕ್ರಮಕ್ಕೆ ಮಂಗಳೂರು, ಹೈದಾರಬಾದ್, ಪುಣೆ ಮತ್ತು ದುಬೈಯಿಂದ ಸುಮಾರು 65 ಮಂದಿ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಗೂಗಲ್‌ಮೀಟ್ ಆನ್‌ಲೈನ್‌ನಲ್ಲಿ ನಡೆಸಲಾಯಿತು.

ಈ ಕಾರ್ಯಕ್ರಮವು ಭಾರತೀಯ ಸಂಸ್ಕೃತಿಗೆ ತಕ್ಕಂತೆ ಭಾರತೀಯ ಹಿರಿಯ ನಾಗರಿಕರಿಗಾಗಿ 14 ವಾರ ನಡೆಸುವ ಮಾನಸಿಕ/ಅರಿವಿನ ವಿಕಾಸದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವನ್ನು ಪ್ರತಿ ಶನಿವಾರ 11 ಗಂಟೆಗೆ ನಡೆಸಲಾಗುವುದು ಯೆನೆಪೊಯ ಯುನಿವರ್ಸಿಟಿಯ ಪ್ರಕಟನೆ ತಿಳಿಸಿದೆ.

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

Appeared in UDAYAVANI(Sudina) on 29-07-2020

# ರೋಗ ನಿರೋಧಕ ಔಷಧ ವಿತರಣೆ




ಉಚಿತ ರೋಗ ನಿರೋಧಕ ಔಷಧ ವಿತರಣೆ ನಡೆಯಿತು.

**ಮುಡಿಪು,** ಜು. 28: ಯೇನಪೋಯ ಹೋಮಿಯೋಪತಿ ಆಸ್ಪತ್ರೆ ಮತ್ತು ಅಲ್ ಇಂಡಿಯಾ ಮುಸ್ಲಿಂ ಡೆವಲಪ್‌ಮೆಂಟ್ ಫೋರಂ ಇವುಗಳ ಸಹಕಾರದಿಂದ ಉಚಿತ ರೋಗ ನಿರೋಧಕ ಔಷಧ ವಿತರಣೆ ಸಜೀಪ ಕಮ್ಯುನಿಕೇಶನ್ ಸೆಂಟರ್‌ನಲ್ಲಿ ಜರಗಿತು.

ಫೋರಂನ ರಾಜ್ಯ ಉಪಾಧ್ಯಕ್ಷ ಎಸ್. ಅಬೂಬಕ್ಕರ್ ಸಜೀಪ, ಬಂಟ್ವಾಳ ತಾಲೂಕಾಧ್ಯಕ್ಷ ಆಶೀರ್ ಪೆರಿಮಾರ್, ಸಜೀಪ ಜುಮ್ಮಾ ಮಸೀದಿಯ ಅಧ್ಯಕ್ಷ ಅಬ್ದುಲ್ ರಜ್ಜಾಕ್, ಫೋರಂನ ಸಾಮಾಜಿಕ ಜಾಲ ತಾಣದ ಮುಖ್ಯಸ್ಥ ದಾನೇಶ್, ಕುರ್ನಾಡು ಪಂ. ಮಾಜಿ ಅಧ್ಯಕ್ಷ ದೇವದಾಸ್ ಭಂಡಾರಿ, ಆಸ್ಪತ್ರೆಯ ಕ್ಯಾಂಪ್‌ನ ಮುಖ್ಯಸ್ಥ ಅಬ್ದುಲ್ ರಝಾಕ್, ವೈದ್ಯರಾದ ಡಾ| ಶಶಿಕಾಂತ್ ಕುಮಾರ್, ಡಾ| ಝುಬಿಯಾ, ಡಾ| ಡೆಲ್ಲಿ ಹಾಗೂ ಸಿಬಂದಿ ಪೂರ್ಣಿಮಾ, ಹರ್ಷಿತಾ, ಪ್ರಸಾದ್ ಭಾಗವಹಿಸಿದ್ದರು.

ಸುಮಾರು 107 ಕುಟುಂಬಗಳ ಯಜಮಾನರು ಬಂದು ತಮ್ಮ ತಮ್ಮ ಕುಟುಂಬದ 800ಕ್ಕೂ ಅಧಿಕ ಜನರು ರೋಗ ನಿರೋಧಕ ಮಾತ್ರೆಗಳನ್ನು ಪಡೆದುಕೊಂಡರು.

UDAYAVANI 27-05-2021

# ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ನಿರ್ವಹಣೆ

ಉಳ್ಳಾಲ: ತಾಲೂಕು ಆಸ್ಪತ್ರೆಗಳನ್ನು ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಯವರು ನಿರ್ವಹಿಸುವ ಮೂಲಕ ವೆನ್ಲಾಕ್ ಆಸ್ಪತ್ರೆಯ ಒತ್ತಡ ಕಡಿಮೆಗೊಳಿಸಬೇಕು ಎಂದು ಶಾಸಕ ಯು.ಟಿ ಖಾದರ್ ಹೇಳಿದರು.



» ಶಾಸಕ ಯು.ಟಿ. ಖಾದರ್ ಸಲಹೆ

ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಮಾತನಾಡಿದರು. ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಲಸಿಕೆ, ಪ್ರತಿದಿನ ಬರುವ ರೋಗಿಗಳಿಗೆ ತೊಂದರೆಯಾಗದ ರೀತಿ ತುರ್ತು ಸಂದರ್ಭಕ್ಕಾಗಿ ಕೋವಿಡ್ ಕೇರ್ ಆಸ್ಪತ್ರೆಯಾಗಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಹೆರಿಗೆ, ಚುಚ್ಚುಮದ್ದಿಗೆ ಬರುವವರಿಗೆ ಬೇರೆಯೇ ಜಾಗದಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ. ಕೋವಿಡ್ ರೋಗಿಗಳಿಗೆ ಫೀವರ್ ಕ್ಲಿನಿಕ್, ಆಕ್ಸಿಜನ್ ಮಟ್ಟ ಕಡಿಮೆಯಾಗಿ ಬಂದವರನ್ನು ತಕ್ಷಣ ಮೇಲಿನ ಮಹಡಿಯಲ್ಲಿ ದಾಖಲುಗೊಳಿಸುವ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ವೈದ್ಯರ ಸೇವೆ ಹಾಗೂ ಆಸ್ಪತ್ರೆಯ ಸಂಪೂರ್ಣ ನಿರ್ವಹಣೆ ಯೇನೆಪೋಯ ಸಂಸ್ಥೆ ವಹಿಸಿಕೊಂಡಿದೆ. 20 ನರ್ಸ್, 12 ವೈದ್ಯರು, ಅಟೆಂಡರ್, ಕ್ಲೀನರ್, ಡೇಟಾ ಎಂಟ್ರಿ ಆಪರೇಟರ್, ಲಾಂಡ್ರಿ ಎಲ್ಲವೂ ನಿರ್ವಹಣೆ ಮಾಡಲಿದೆ ಎಂದರು.

ಉಳ್ಳಾಲ ನಗರಸಭೆ ಅಧ್ಯಕ್ಷೆ ಚಿತ್ರಕಲಾ, ಉಪಾಧ್ಯಕ್ಷ ಅಯ್ಯೂಬ್ ಮಂಚಿಲ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಪ್ರಶಾಂತ್, ನಗರಸಭೆ ಮಾಜಿ ಸದಸ್ಯ ಮುಸ್ತಾಫ ಮೊದಲಾದವರು ಉಪಸ್ಥಿತರಿದ್ದರು.

ATTESTED

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

VIJAYAVANI 25-03-2021

# ಇಂದಿನಿಂದ ಪ್ರಕೃತಿ, ಯೋಗ ಚಿಕಿತ್ಸೆ

ಮಂಗಳೂರು: ಯೇನೆಪೋಯ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಯೇನೆಪೋಯ ಪರಿಗಣಿಸಲ್ಪಟ್ಟ ವಿ.ವಿ ವತಿಯಿಂದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆ ಪುಣೆ ಸಹಯೋಗದಲ್ಲಿ ಉಚಿತ ಮೆಗಾ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸಾ ಶಿಬಿರ ಮಾ.25ರಿಂದ 28ರವರೆಗೆ ದೇರಳಕಟ್ಟೆಯ ವಿವಿಧ ಸ್ಥಳಗಳಲ್ಲಿ ನಡೆಯಲಿದೆ.

ಮಾ.25ರಿಂದ 27ರವರೆಗೆ ನರಿಂಗಾನದ ಯೇನೆಪೋಯ ಆಯುಷ್ ಕ್ಯಾಂಪಸ್‌ನಲ್ಲಿ, 27ರಂದು ಫುಡ್‌ಕ್ರಾಫ್ಟ್ ದೇರಳಕಟ್ಟೆಯಲ್ಲಿ, 28ರಂದು ದೇರಳಕಟ್ಟೆ ಯೇನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಬೆಳಗ್ಗೆ 9ರಿಂದ ಸಾಯಂಕಾಲ 4ರವರೆಗೆ ಶಿಬಿರ ನಡೆಯಲಿದೆ. ಉಚಿತ ಶಿಬಿರದ ಸೌಲಭ್ಯ ಪಡೆಯುವವರಿಗೆ ನೋಂದಣಿ ಕಡ್ಡಾಯವಾಗಿದ್ದು, ಇದಕ್ಕಾಗಿ ಆಸ್ಪತ್ರೆಯನ್ನು ಸಂಪರ್ಕಿಸಬಹುದು ಎಂದು ಯೇನೆಪೋಯ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವೈದ್ಯಕೀಯ ಕಾಲೇಜಿನ ಡೀನ್ ಡಾ.ನವೀನ್ ಜಿ.ಎಚ್.ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿಬಿರದಲ್ಲಿ ಪೌಷ್ಟಿಕಾಂಶದ ಬಗ್ಗೆ ಸಮಾಲೋಚನೆ, ಸೂಜಿ ಚಿಕಿತ್ಸೆ, ಆಕ್ಯುಪ್ರೆಶರ್, ಜಲಚಿಕಿತ್ಸೆ, ಮಾಲೀಶ್ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಯೋಗ ಪ್ರಾಣವಿದ್ಯಾ ಚಿಕಿತ್ಸೆ, ಭೌತ್ತ ಚಿಕಿತ್ಸೆ, ಯೋಗ ಚಿಕಿತ್ಸೆ ಜತೆಗೆ ರೋಗ ನಿರ್ದಿಷ್ಟ ಆಹಾರ ಪ್ರದರ್ಶನ, ಉಚಿತ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸೆಯ ಸಮಾಲೋಚನೆ ಮತ್ತು ಚಿಕಿತ್ಸಾ ಸೌಲಭ್ಯಗಳು ಇರಲಿದೆ ಎಂದು ತಿಳಿಸಿದರು.

ಡಾ.ನಾರಾಯಣ, ಅಬ್ದುಲ್ ರಜಾಕ್ ಸುದ್ದಿಗೋಷ್ಠಿಯಲ್ಲಿದ್ದರು.

VIJAYAVANI 25-03-2021

24 ಗಂಟೆಯೂ ರೇಡಿಯಾಲಜಿ ಸೇವೆ | ಹೊಸ ತಂತ್ರಜ್ಞಾನದ ಉಪಕರಣ

# ಯೇನೆಪೊಯದಲ್ಲಿ ಆಧುನಿಕ ಸೌಲಭ್ಯ

ಮಂಗಳೂರು: ಕೊಡಿಯಾಲ್‌ಬೈಲ್ ಯೇನೆಪೊಯ ಸ್ಪೆಷಾಲಿಟಿ ಆಸ್ಪತ್ರೆ ರೇಡಿಯಾಲಜಿ ಸೇವೆಗಳನ್ನು 24 ಗಂಟೆಯೂ ನುರಿತ ವೈದ್ಯರ ಉಪಸ್ಥಿತಿಯೊಂದಿಗೆ ನೀಡಲು ಸಜ್ಜಾಗಿದೆ. ಹಗಲು-ರಾತ್ರಿ ಆಸ್ಪತ್ರೆಗೆ ಆಗಮಿಸುವ ರೋಗಿಗಳ ತ್ವರಿತ, ನಿಖರ ರೋಗ ನಿರ್ಣಯವನ್ನು(ಡಯಾಗ್ನಸಿಸ್) ಪಡೆಯಬಹುದು. ಆಸ್ಪತ್ರೆ ತನ್ನ ರೇಡಿಯಾಲಜಿ ವಿಭಾಗಕ್ಕೆ ಹೊಸ ತಂತ್ರಜ್ಞಾನ ಮೂಲಕ ನವೀಕೃತಗೊಂಡ ಉಪಕರಣಗಳನ್ನು ಅಳವಡಿಸಲಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಮುಹಮ್ಮದ್ ತಾಹೀರ್ ತಿಳಿಸಿದರು.

ಹಿರಿಯ ರೇಡಿಯಾಲಜಿ ತಜ್ಞರಾದ ಡಾ.ದೇವದಾಸ್ ಆಚಾರ್ಯ, ಡಾ.ರವಿಚಂದ್ರ ಜಿ ಮತ್ತು ಡಾ.ವಿನಾಯಕ ಯು.ಎಸ್ ನೇತೃತ್ವದ ತಂಡ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಲಭ್ಯವಿದೆ. ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಬುಧವಾರ ಈ ಹೊಸ ಸೌಲಭ್ಯವನ್ನು ಆರಂಭಿಸಲಾಗಿದೆ. ತುರ್ತು ಆರೈಕೆಯಲ್ಲಿನ ವಿಳಂಬ ತಪ್ಪಿಸುವ ಉದ್ದೇಶದಿಂದ ಈ ಸೇವೆ ಪ್ರಾರಂಭಿಸಲಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೈದ್ಯರ ಲಭ್ಯತೆಯೊಂದಿಗೆ ದೊರಕಲಿರುವ ಹಗಲು-ರಾತ್ರಿ ರೇಡಿಯಾಲಜಿ ಸೇವೆ ನಗರದ ಆರೋಗ್ಯ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಿದೆ. ಮಂಗಳೂರಿನ ಹೃದಯಭಾಗದಲ್ಲಿ ದೊರೆಯುವ ಈ ಸೌಲಭ್ಯ ರೋಗಿಗಳ ತುರ್ತು ಆರೈಕೆಗೆ ವರದಾನವಾಗಲಿದೆ. ಇದು ಜೀವ ಉಳಿಸಬಲ್ಲ ಸೇವೆಯಾಗಿದೆ. ರೋಗಿಗಳಿಗೆ ತ್ವರಿತ ಪರಿಹಾರ ನೀಡಲಿದೆ ಎಂದರು. ಆಸ್ಪತ್ರೆ ತನ್ನ ಯುರೋಲಜಿ ಸೇವೆಗಳಿಗೆ ಡಾರ್ನಿಯರ್ ಕಾಂಪ್ಯಾಕ್ಟ್ ಡೆಲ್ಟಾ ಲಿಥೋಟ್ರಿಪ್ಟರ್‌ನ್ನು ಸೇರ್ಪಡೆಗೊಳಿಸುತ್ತಿದೆ. ಮೂತ್ರ ಪಿಂಡದ ಕಲ್ಲು ನಿವಾರಿಸುವಲ್ಲಿ, ಚೇತರಿಕೆ ಸಮಯ ಸುಧಾರಿಸುವಲ್ಲಿ ಮೂತ್ರಶಾಸ್ತ್ರಜ್ಞರನ್ನು ಶಕ್ತಗೊಳಿಸುವ ಈ ಉಪಕರಣವು ಶಕ್ತಿಯುತ ಚಿತ್ರಣ, ಗರಿಷ್ಠ ಶಕ್ತಿ ನೀಡುತ್ತದೆ. ಹೃದ್ರೋಗ ಮತ್ತು ಹೃದಯ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ಚಿಕಿತ್ಸೆ, ಮೂತ್ರಶಾಸ್ತ್ರ ಮತ್ತು ನೆಫ್ರಾಲಜಿ, ನರವಿಜ್ಞಾನ ಮತ್ತು ನರಶಸ್ತ್ರಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ, ವೈದ್ಯಕೀಯ ಮತ್ತು ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ, ಮೂಳೆಚಿಕಿತ್ಸೆ, ಶಿಶು ಚಿಕಿತ್ಸೆ, ಮಕ್ಕಳ ಚಿಕಿತ್ಸೆ ವಿಭಾಗ, ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ, ಬೆನ್ನುಮೂಳೆಯ ಕ್ಲಿನಿಕ್, ಡಯಾಲಿಸಿಸ್ ಘಟಕ ಹೊಂದಿದೆ ಎಂದು ವಿವರಿಸಿದರು.

ಆಸ್ಪತ್ರೆ ಆಪರೇಶನಲ್ ಡೈರೆಕ್ಟರ್ ಯೇನೆಪೊಯ ಅಬ್ದುಲ್ಲಾ ಜಾವೇದ್, ಸಿಇಒ ಡಾ.ಸಿ.ಕೆ.ರಂಜನ್, ಡಾ.ಆಕಾಶ್, ಡಾ.ದೇವದಾಸ್ ಆಚಾರ್ಯ, ಡಾ.ರವಿಚಂದ್ರ, ಡಾ.ವಿನಾಯಕ್ ಯು.ಎಸ್., ಡಾ.ಅಶೋಕ್ ಪಂಡಿತ್ ಉಪಸ್ಥಿತರಿದ್ದರು.



ಯೇನೆಪೊಯ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದೊರೆಯುವ ರೇಡಿಯಾಲಜಿ ಸೇವೆಗಳ ಕುರಿತು ಮಾಹಿತಿ ಪತ್ರವನ್ನು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಮುಹಮ್ಮದ್ ತಾಹೀರ್ ಬುಧವಾರ ಆಸ್ಪತ್ರೆಯಲ್ಲಿ ಬಿಡುಗಡೆಗೊಳಿಸಿದರು. ಆಸ್ಪತ್ರೆ ಆಪರೇಶನಲ್ ಡೈರೆಕ್ಟರ್ ಯೇನೆಪೊಯ ಅಬ್ದುಲ್ಲಾ ಜಾವೇದ್, ಸಿಇಒ ಡಾ.ಸಿ.ಕೆ.ರಂಜನ್ ಮೊದಲಾದವರಿದ್ದರು.

## ರೇಡಿಯಾಲಜಿ ಸಲಕರಣೆಗಳು

- ಕ್ಯಾನನ್ ಆಕ್ವಿಲಿಯನ್ ಸ್ಟಾರ್ಟ್ ಸಿಟಿ ಸಿಸ್ಟಂ: ಕಾರ್ಡಿಯಾಕ್ ಸ್ಕ್ಯಾನ್ ಹೊರತುಪಡಿಸಿ ಎಲ್ಲ ರೀತಿಯ ಸ್ಕ್ಯಾನ್, ಇಂಟರ್ವೆನ್ಷನಲ್ ರೇಡಿಯಾಲಜಿ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ.
- ಫಿಲಿಪ್ಸ್, ಇಂಜೇನಿಯಾ 1.5 ಟಿ ಎಂಆರ್‌ಐ ಸಿಸ್ಟಂ: ಆಡಿಯೋ ಮತ್ತು ವಿಡಿಯೋ ಸೌಲಭ್ಯಗಳೊಂದಿಗೆ ಈ ಉಪಕರಣವಿದೆ.
- ಸ್ಯಾಮ್ ಸಂಗ್ ಎಚ್‌ಎಸ್ 70ಎ ಅಲ್ಟ್ರಾಸೌಂಡ್ ಸಿಸ್ಟಂ: 4ಡಿ ಸ್ಕ್ಯಾನ್‌ನೊಂದಿಗೆ ತೀವ್ರ ಪಿತ್ತಜನಕಾಂಗದ ಕಾಯಿಲೆ ಮತ್ತು ಭ್ರೂಣದ ಚಿತ್ರಣವನ್ನು ಪತ್ತೆಹಚ್ಚಲು ಫೈಬ್ರೊಸ್ಕ್ಯಾನ್ ಸೌಲಭ್ಯ ಹೊಂದಿದೆ.
- ಡಿಜಿಕ್ಸ್ ಎಕೋ ಡಿಜಿಟಲ್ ಎಕ್ಸ್‌ರೇ ಸಿಸ್ಟಂ: ವ್ಯಾಪಕ ಶ್ರೇಣಿ ಹೊಂದಿರುವ ಅತ್ಯಾಧುನಿಕ ಡಿಜಿಟಲ್ ಎಕ್ಸ್‌ರೇ ಉಪಕರಣ.
- ಮೆಟಲ್‌ಟೋನಿಕಾ ಫ್ಲಾಟ್ ಎಸ್‌ಇ ಮ್ಯಾಮೊಗ್ರಾಫರ್-ಸಸ್ತನಿ ಗ್ರಂಥಿಗಳ ಸ್ಪಷ್ಟ ಚಿತ್ರಗಳನ್ನು ತೆಗೆಯಬಲ್ಲ ಹೆಚ್ಚು ಪರಿಣಾಮಕಾರಿ ಉಪಕರಣ.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

Udayavani 25-05-2021

▶ ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಾಸಕ ಖಾದರ್ ಭೇಟಿ

# 'ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಣೆ'



ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಾಸಕ ಖಾದರ್ ಅವರು ಭೇಟಿ ನೀಡಿದರು.

**ಉಳ್ಳಾಲ, ಮೇ 24:** ಉಳ್ಳಾಲ ಸಮುದಾಯ ಆರೋಗ್ಯ ಕೇಂದ್ರವನ್ನು ತುರ್ತು ಸಂದರ್ಭ ಕೋವಿಡ್ ಕೇರ್ ಆಸ್ಪತ್ರೆಯಾಗಿ ನಿರ್ಮಿಸಲು ಹಂತ ಹಂತದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಲಸಿಕೆ, ಗರ್ಭಿಣಿಯರು ಸಹಿತ ನಿತ್ಯ ಬರುವ ರೋಗಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವಿಭಾಗವನ್ನು ಮಾಡಲಾಗುತ್ತಿದೆ ಎಂದು ಶಾಸಕ ಯು.ಟಿ. ಖಾದರ್ ಹೇಳಿದರು.

ಉಳ್ಳಾಲದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕೋವಿಡ್-19 ನಿರ್ವಹಣೆಗೆ ಸಜ್ಜುಗೊಳ್ಳುತ್ತಿರುವ ಆಸ್ಪತ್ರೆ ವಠಾರವನ್ನು ವೀಕ್ಷಿಸಿ ಅವರು ಮಾತನಾಡಿದರು. ಹೆರಿಗೆ, ಇಂಜೆಕ್ಷನ್ ಬರುವವರಿಗೆ ಬೇರೆಯೇ ಜಾಗದಲ್ಲಿ ಪ್ರವೇಶ ಮತ್ತು ಚಿಕಿತ್ಸೆ, ಕೋವಿಡ್ ಸಂಬಂಧಿಸಿದ ರೋಗಿಗಳಿಗೆ ಬೇರೆಯದೇ ಆದ ಫೀವರ್ ಕ್ಲಿನಿಕ್ ಪ್ರವೇಶ ಹಾಗೂ ಆಕ್ಸಿಜನ್ ಲೆವೆಲ್ ಕಡಿಮೆ ಆಗಿ ಬಂದವರನ್ನು ತಕ್ಷಣ ಮೇಲಿನ ಮಹಡಿಯಲ್ಲಿ ದಾಖಲುಗೊಳಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ ಎಂದರು.

ವೈದ್ಯರ ಸೇವೆ ಹಾಗೂ ಆಸ್ಪತ್ರೆಯ ಸಂಪೂರ್ಣ ನಿರ್ವಹಣೆಯನ್ನು ಯೇನಪೊಯ ಸಂಸ್ಥೆ ವಹಿಸಿಕೊಂಡಿದೆ. 20 ನರ್ಸ್‌ಗಳು, 12 ವೈದ್ಯರು, ಅಟೆಂಡರ್, ಕ್ಲೀನರ್, ಡೇಟಾ ಎಂಟ್ರಿ ಆಪರೇಟರ್, ಲಾಂಡ್ರಿ ಎಲ್ಲವೂ ನಿರ್ವಹಣೆ ಮಾಡಲಿದೆ. ತಾನು ಮತ್ತು ಜಿಲ್ಲಾಧಿಕಾರಿ ಯೇನಪೊಯ ಸಂಸ್ಥೆ ಎದುರು ನಡೆಸಿದ ಸಭೆಯಲ್ಲಿ ಸಂಸ್ಥೆ ಅಧಿಕೃತರು ಒಪ್ಪಿಕೊಂಡಿದ್ದಾರೆ ಎಂದ ಅವರು ಸದ್ಯ ಉಳ್ಳಾಲದ ಆರೋಗ್ಯ ಕೇಂದ್ರವನ್ನು ತಯಾರು ಮಾಡಿ ಇಡಲಾಗುವುದು. ಊರಿನವರಿಗೆ ತೊಂದರೆಯಾಗುವ ಸಂದರ್ಭ ತತ್‌ಕ್ಷಣವೇ ಆರಂಭಿಸಲಾಗುವುದು ಎಂದರು.

ಉಳ್ಳಾಲ ನಗರಸಭೆ ಅಧ್ಯಕ್ಷೆ ಚಿತ್ರಾ ಚಂದ್ರಕಾಂತ್, ಉಪಾಧ್ಯಕ್ಷ ಅಯೂಬ್ ಮಂಚಿಲ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ| ಪ್ರಶಾಂತ್, ನಗರಸಭೆ ಮಾಜಿ ಸದಸ್ಯ ಮುಸ್ತಾಫ ಮೊದಲಾದವರು ಉಪಸ್ಥಿತರಿದ್ದರು.

## ಖಾಸಗಿ ಕಾಲೇಜಿನವರು ಕಾರ್ಯ ನಿರ್ವಹಿಸಲಿ

ಪ್ರತಿ ತಾಲೂಕು ಆಸ್ಪತ್ರೆಗಳನ್ನು ಬೇರೆ ಬೇರೆ ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಯವರು ನಿರ್ವಹಿಸಬೇಕು. ಈ ಮೂಲಕ ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ ಬರುವಂತಹ ರೋಗಿಗಳ ಒತ್ತಡವನ್ನು ಕಡಿತ ಗೊಳಿಸಬೇಕು ಎಂದು ಶಾಸಕರು ಹೇಳಿದರು.

UDAYAVANI (Sudina) 30-03-2021

# ಕುಂಪಲ: ಆರೋಗ್ಯ ತಪಾಸಣೆ, ಹೋಮಿಯೋಪತಿ ಚಿಕಿತ್ಸೆ



ವಿಶ್ವಕ್ಷಯ ರೋಗ ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮ ಜರಗಿತು.

**ಉಳ್ಳಾಲ, ಮಾ. 29:** ಕ್ಷಯರೋಗವು ಕೆಮ್ಮು, ಸೀನು, ಉಗುಳುವಿಕೆಯಿಂದ ಹರಡುತ್ತದೆ. ಸಾಮಾಜಿಕ ಅಂತರ ಮತ್ತು ಪೌಷ್ಟಿಕ ಆಹಾರವನ್ನು ಉಪಯೋಗಿಸುವುದರಿಂದ ಇದನ್ನು ತಡೆಗಟ್ಟಬಹುದು ಎಂದು ಯೇನಪೊಯ ಹೋಮಿಯೋಪತಿ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಎನ್.ಎಸ್.ಎಸ್ ಯುನಿಟ್ ಕಾರ್ಯಕ್ರಮ ಅಧಿಕಾರಿ ಡಾ| ಶಶಿಕಾಂತ್ ಅಭಿಪ್ರಾಯಪಟ್ಟರು.

ಸೋಮೇಶ್ವರ ಪುರಸಭೆ ವ್ಯಾಪ್ತಿಯ ಕುಂಪಲ ಆಶ್ರಯಕಾಲನಿ ಶ್ರೀ ಕೊರಗಜ್ಜ ಸೇವಾ ಸಮಿತಿ ಹಾಗೂ ಮಹಿಳಾ ಸೇವಾ ಸಮಿತಿ ನೇತೃತ್ವದಲ್ಲಿ ಯೇನಪೊಯ ಹೋಮಿಯೋಪತಿ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಸಹಕಾರದಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಹೋಮಿಯೋಪತಿ ಚಿಕಿತ್ಸೆ ಕಾರ್ಯಕ್ರಮ ಮತ್ತು ವಿಶ್ವಕ್ಷಯ ರೋಗ ದಿನದ ಅಂಗವಾಗಿ ಜನರಿಗೆ ಜಾಗೃತಿ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿ ಅವರು ಮಾತನಾಡಿದರು.

ಕುಂಪಲ ನವಚೇತನ ಕ್ಲಬ್‌ನ ಗೌರವಾಧ್ಯಕ್ಷರಾದ ವಿನೋದ್ ಕುಂಪಲ ಮಾತನಾಡಿ, ಆಶ್ರಯಕಾಲನಿ ಉಚಿತ ಆರೋಗ್ಯ ತಪಾಸಣೆ, ಹೋಮಿಯೋಪತಿ ಚಿಕಿತ್ಸೆ ಕಾರ್ಯಕ್ರಮದ ಸದುಪಯೋಗವನ್ನು ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬೇಕು ಎಂದರು.

ಯೇನಪೊಯ ಹೋಮಿಯೋಪತಿ ಕಾಲೇಜಿನ ಡಾ| ಪ್ರಶಾಂತ್, ಡಾ| ಕಿರಣ್, ಡಾ| ಶ್ರೀಕುಮಾರ್, ಪ್ರಯೋಗಾಲಯ ತಂತ್ರಜ್ಞ ಹೈದರ್ ಅಲಿ, ಪವಿತ್ರಾ, ಶೆ[illegible] ಫೆರ್ನಾಂಡಿಸ್, ಹಸೈನಾರ್, ಆಶ್ರಯ ಕಾಲನಿ ಮಹಿಳಾ ಸೇವಾ ಸಮಿತಿಯ ಅಧ್ಯಕ್ಷೆ ವೇದಾವತಿ, ಕೊರಗಜ್ಜ ಸೇವಾ ಸಮಿತಿ ಅಧ್ಯಕ್ಷ ಕಿರಣ್ ಕುಮಾರ್, ಕೊರಗಜ್ಜ ಸೇವಾ ಸಮಿತಿಯ ಗೌರವಾಧ್ಯಕ್ಷ ಯೋಗೀಂದ್ರ ಮತ್ತು ರಮೇಶ್ ಕೆ.ಪಿ. ಉಪಸ್ಥಿತರಿದ್ದರು. ಆಶ್ರಯ ಕಾಲನಿ ಕೊರಗಜ್ಜ ಸೇವಾ ಸಮಿತಿಯ ಗೌರವಾಧ್ಯಕ್ಷ ಎಂ. ಆನಂದ ನಿರೂಪಿಸಿದರು.

ATTESTED
Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

Report

Yenepoya Medical College

**KERALA FLOOD RELIEF**

On August 2018, Kerala witnessed the most disastrous monsoon that rendered more than 200,000 homeless, with no means of access – roads, electricity, mobile phone networks, and transport.

To support the state in its disaster relief activities and to bring in immediate relief, the management and students at Yenepoya University have contributed supplies – food, water, medicines, clothes, and other basic amenities.









Transpotation of relief supplies




Handing over supplies to the Wayanad flood relief cell authorities

The District Collector, Wayanad and the authorities at the Wayanad flood relief cell received the timely contributions made by the University and were in great appreciation towards the support and help given.

ATTESTED

Registrar
YENEPOYA
(Deemed to be University)

Dr. Gangadhara Somayaji K S
Registrar
Yenepoya (Deemed to be University)
University Road, Deralakatte
Mangalore 575 018, Karnataka.

MEDICAL SUPERINTENDENT
YENEPOYA MEDICAL COLLEGE HOSPITAL
MANGALORE-575 018